**ಸಾಕ್ಷಿಗೆ ದಿನಾಂಕಃ 11.11.2025 ರಂದು ಪ್ರಮಾಣ ಮಾಡಿಸಲಾಯಿತು.**

**ಪಾಟೀ ಸವಾಲುಃ ಶ್ರೀ. ಎಸ್.ಎ.ಎಸ್. 3 ನೇ ಪ್ರತಿವಾದಿ ಪರ ವಕೀಲರಿಂದಃ**

ವಾದಿಯು ಸಲ್ಲಿಸಿದ Memo of Instruction ದಾವಾ ಸ್ವತ್ತಿಗೆ ಸಂಬಂಧಿಸಿದಂತೆ ಅಳತೆ ಕಾರ್ಯವನ್ನು ನಿರ್ವಹಿಸಿರುತ್ತೇನೆ. ಅಳತೆ ಕಾರ್ಯ ನಿರ್ವವಹಿಸುವಾಗ ಯಾವುದೇ ಫೋಟೋ ಮತ್ತು ವೀಡಿಯೋ ಮಾಡಿರುವುದಿಲ್ಲ. 3 ನೇ ಪ್ರತಿವಾದಿಗೆ ರಿಜಿಸ್ಟರ್ ಪೋಸ್ಟ್ ಮೂಲಕ ನೋಟಿಸನ್ನು ಕಳುಹಿಸಿರುತ್ತೇನೆ. ಜಾರಿಯಾದ ಬಗ್ಗೆ ಯಾವುದೇ ರಶೀದಿಯನ್ನು ಹಾಜರುಪಡಿಸಿರುವುದಿಲ್ಲ. 3 ನೇ ಪ್ರತಿವಾದಿಗೆ ನೋಟಿಸು ಜಾರಿಯಾಗಿರುವುದಿಲ್ಲ ಎಂದರೆ ಸಾಕ್ಷಿಯು ಅಳತೆ ಸಮಯದಲ್ಲಿ 3 ನೇ ಪ್ರತಿವಾದಿಯು ನೋಟಿಸು ಜಾರಿಯಾಗಿರುವುದಿಲ್ಲ ಎಂದು ಹೇಳಿರುತ್ತಾರೆ ಮತ್ತು ಆ ಸಮಯದಲ್ಲಿ ಸ್ಥಳದಲ್ಲಿ ಹಾಜರಿರುತ್ತಾರೆ. ಮಹಜರ್ ಸಮಯದಲ್ಲಿ 3 ನೇ ಪ್ರತಿವಾದಿ ಹಾಜರಿದ್ದ ಬಗ್ಗೆ ನನ್ನ ಹೇಳಿಕೆ ಹೇಳಿರುತ್ತೆನೆ ಆದರೆ ಯಾವುದೇ ದಾಖಲೆ ಇರುವುದಿಲ್ಲ.

ಸರ್ವೆ ನಂ.14/2 ನ್ನು ಅಳತೆ ಮಾಡಿರುತ್ತೇನೆ. ನಿ.ಸಿ.1 ನ್ನು ನಾನೇ ತಯಾರು ಮಾಡಿರುತ್ತೇನೆ. ಸದರಿ ವರದಿಯಲ್ಲಿ ಸರ್ವೆ ನಂ.114/2 ನ್ನು ಅಳತೆ ಮಾಡಿರುತ್ತೇನೆ ಎಂದು ಹೇಳಿರುತ್ತೇನೆ ಎಂದರೆ ಸರಿ. ಸರ್ವೆ ನಂ.14/2 ರ ಒಟ್ಟು ವಿಸ್ತೀರ್ಣ 0.12 ಗುಂಟೆ. ಸದರಿ ಸ್ವತ್ತಿನಲ್ಲಿ 3 ನೇ ಪ್ರತಿವಾದಿಗೆ 20 x 30 ಅಡಿಯನ್ನು ವಾದಿಯ ತಂದೆ ಮಾರಾಟ ಮಾಡಿರುತ್ತಾರೆ ಎಂದರೆ ಸರಿ. ಸದರಿ ವಿಚಾರವನ್ನು ನನ್ನ ವರದಿಯಲ್ಲಿ ನಮೂದು ಮಾಡಿರುತ್ತೇನೆ. ಸದರಿ ಸ್ವತ್ತು ಪೂರ್ವ ದಿಕ್ಕಿನಲ್ಲಿ ರಸ್ತೆಯ ಕಡೆಯಿಂದ ಪಶ್ಚಿಮ ದಿಕ್ಕಿನಲ್ಲಿ ಇರುತ್ತದೆ ಎಂದರೆ ಸರಿ. 12 ಅಡಿ ವಿಸ್ತೀರ್ಣದಲ್ಲಿ 3 ನೇ ಪ್ರತಿವಾದಿಯ ಜಾಗವನ್ನು ಹೊರತುಪಡಿಸಿ ಉಳಿಕೆ ಜಮೀನಿನ ಬಗ್ಗೆ ನಮೂದು ಮಾಡಿರುವುದಿಲ್ಲ. Memo of Instruction ನಲ್ಲಿ 3 ನೇ ಪ್ರತಿವಾದಿಯ ಜಾಗವನ್ನು ಹೊರತುಪಡಿಸಿ ಉಳಿಕೆ ಜಾಗವನ್ನು ಗುರುತು ಮಾಡಿ ಎಂದು ನಮೂದು ಇರುತ್ತದೆ ಎಂದರೆ ಸರಿಯಲ್ಲ. 20 x 30 ಅಡಿ ಜಾಗ 600 ಚದರ ಅಡಿ ಇರುತ್ತದೆ. ಇದು ½ ಗುಂಟೆ ಬರಬಹುದು. ದಾವಾ ಸ್ವತ್ತಿನಲ್ಲಿ ಇರುವ ಮನೆಗಳು, ಮಿಲ್, ನೀರಿನ ತೊಂಬೆಗಳನ್ನು ಗುರುತಿಸಿರುತ್ತೇನೆ.

0.12 ಗುಂಟೆ ಸ್ವತ್ತಿನಲ್ಲಿ ವಾದಿ ಕುಟುಂಬಕ್ಕೆ ಸೇರಿದ ತೊಟ್ಟಿಮನೆ ಇರುತ್ತದೆ ಎಂದರೆ ಸರಿ. 3 ನೇ ಪ್ರತಿವಾದಿಯು ತನ್ನ ಜಾಗದಲ್ಲಿ ಫ್ಲೋರ್ ಮಿಲ್ ನ್ನು ನಿರ್ಮಿಸಿರುತ್ತಾರೆ ಎಂದರೆ ಸರಿ. ನಕಾಶೆಯಲ್ಲಿ ಸದರಿ ತೊಟ್ಟಿಮನೆಯನ್ನು ನಮೂದು ಮಾಡಿರುವುದಿಲ್ಲ ಎಂದರೆ ಸರಿ. ಸದರಿ

ಮನೆಯನ್ನು ಅಳತೆ ಮಾಡಿರುವುದಿಲ್ಲ. ನಕಾಶೆಯನ್ನು ವಾದಿಯ ನಿರ್ದೇಶನದಂತೆ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನೀರಿನ ತೊಂಬೆಯನ್ನು ವಾದಿಗಳ ಕೋರಿಕೆಯ ಮೇರೆಗೆ ಗುರುತು ಮಾಡಿರುತ್ತೇನೆ. Memo of Instruction ನಲ್ಲಿ ನೀರಿನ ತೊಂಬೆಯಿರುವುದನ್ನು ಗುರುತಿಸಿ ಎಂದು ಹೇಳಿರುವುದಿಲ್ಲ. ಆದರೂ ಸಹ ವಾದಿಗೆ ಸಹಾಯ ಮಾಡಲೆಂದು ಗುರುತು ಮಾಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ತೊಂಬೆಯು ಸರ್ಕಾರಿ ರಸ್ತೆಯಲ್ಲಿ ಬರುತ್ತದೆ. ಸರ್ಕಾರಿ ರಸ್ತೆಯಲ್ಲಿ ತೊಂಬೆ ಇದ್ದರೂ ಸಹ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನಿ.ಪಿ.2 ರ ಜಾಗವನ್ನು ನಾನು ಅಳತೆ ಮಾಡಿರುತ್ತೇನೆ. ನಿ.ಪಿ.2 ರ ಆಧಾರದ ಮೇಲೆ ಅಳತೆ ಕಾರ್ಯ ನಿರ್ವಹಿಸಿರುತ್ತೇನೆ ಎಂದರೆ ಸರಿಯಲ್ಲ. ಮೂಲ ಅಟ್ಲಾಸ್ ದಾಖಲೆ ಮತ್ತು ನಿ.ಪಿ.2 ಒಂದಕ್ಕೊಂದು ತಾಳೆ ಇರುವುದಿಲ್ಲ ಎಂದರೆ ಸರಿ.

3 ನೇ ಪ್ರತಿವಾದಿಯು ಖರೀದಿ ಮಾಡಿದ ಜಾಗದ ಪೂರ್ವಕ್ಕೆ ರಸ್ತೆ ಇದ್ದು, ಮೂರು ಕಡೆ ವಾದಿಗಳ ಸ್ವತ್ತು ಇರುತ್ತದೆ ಎಂದರೆ ಸರಿ. ಪೂರ್ವದಿಂದ ಪಶ್ಚಿಮದ ಕಡೆಗೆ 20 x 30 ಅಡಿ ಅಳತೆ ಮಾಡಿರುತ್ತೇನೆ. ಪೂರ್ವದಿಂದ ಪಶ್ಚಿಮದ ಕಡೆಗೆ 1.00 ಗುಂಟೆ ಬರುತ್ತದೆ. ನಂತರ ವಾದಿಗಳಿಗೆ ಸೇರಿದ ಜಮೀನು ಇರುವುದಿಲ್ಲ. ನಿ.ಪಿ.2 ರ ಪ್ರಕಾರ ಪಶ್ಚಿಮದ ಕಡೆಗೆ ಜಾಗ ಇರುತ್ತದೆ ಎಂದು ನಮೂದು ಇದ್ದು, ಆದರೆ ಸ್ಥಳದಲ್ಲಿ ಜಾಗ ಇರುವುದಿಲ್ಲ. ನಾನು ಸ್ಥಳಕೆ ಹೋಗಿರುವುದಿಲ್ಲ, ನಕಾಶೆಯನ್ನು ವಾದಿಗಳ ನಿರ್ದೇಶನದಂತೆ ತಯಾರು ಮಾಡಿರುತ್ತೇ ಎಂದರೆ ಸರಿಯಲ್ಲ. ದಾವಾ ಸ್ವತ್ತು ನಾನು ಅಳತೆ ಮಾಡುವಾಗ ವಾದಿಯ ಹೆಸರಿನಲ್ಲಿ ಇತ್ತು. ಅಳತೆಯನ್ನು ದಿ.04.07.2022 ರಂದು ಮಾಡಿರುತ್ತೇನೆ. ದಾಖಲೆಗಳನ್ನು ನಾನು ಸರಿಯಾಗಿ ಪರಿಶೀಲನೆ ಮಾಡಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತು 2024 ರವರೆಗೆ ವಾದಿಯ ತಂದೆಯ ಹೆಸರಿನಲ್ಲಿತ್ತು ಎಂದರೆ ಸಾಕ್ಷಿಯು ಇರಬಹುದು ಎಂದು ನುಡಿದಿರುತ್ತಾರೆ. ದಾವಾ ಸ್ವತ್ತಿನಲ್ಲಿ ಯಾವುದೇ ಒತ್ತುವರಿ ಆಗಿರುವುದಿಲ್ಲ ಎಂದರೆ ಸರಿಯಲ್ಲ. ಅಳತೆ ಸಮಯದಲ್ಲಿ 3 ನೇ ಪ್ರತಿವಾದಿಯು ಹಾಜರಿರಲಿಲ್ಲ ಹಾಗೂ ವಾದಿಯ ಕೋರಿಕೆಯ ಮೇರೆಗೆ ಅಳತೆ ಮಾಡಿರುತ್ತೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ನನ್ನ ಉಕ್ತ ಲೇಖನಕ್ಕೆ ಬೆರಳಚ್ಚು ಮಾಡಲಾಯಿತು)**

**ಓ ಹೇ ಕೇ ಸ ಇ ಒ.**

**1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು**
**ಮತ್ತು ಪ್ರ.ದ.ನ್ಯಾದಂ. ತಿ.ನರಸೀಪುರ.**